ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ 01/04/2019.

ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನ ಗ್ರೇಡ್–3 ಗುತ್ತಿಗೆದಾರರು ಕೊರಟಗೆರೆ ಪಟ್ಟಣ ಪಂಚಾಯ್ತಿಯಿಂದ ಕರೆಯಲಾದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೋಟೆ ಬೀದಿಯ ಸಮುದಾಯ ಭವನ ನಿರ್ಮಾಣ ಮಾಡಲು ಗುತ್ತಿಗೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ಕಾಮಗಾರಿಯ ಮೊದಲನೆ ಕಂತಿನ ಹಣವನ್ನು ಬಿಡುಗಡೆ ಮಾಡಲು ಶ್ರೀ.ಜನಾರ್ಧನ ಎಂ.ಕೆ, ಜಿ.ಐ.ಎಸ್ ನೋಡಲ್ ಇಂಜಿನಿಯರ್, ಪಟ್ಟಣ ಪಂಚಾಯ್ತಿ, ಕೊರಟಗೆರೆ ರವರು ರೂ.10,000/– ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:01/04/2019 ರಂದು ಶ್ರೀ.ಜನಾರ್ಧನ ಎಂ.ಕೆ ರವರ ಸೂಚನೆಯ ಮೇರೆಗೆ **ಡಿ** ಗ್ರೂಪ್ ನೌಕರರಾದ ಶ್ರೀ.ಸುರೇಶ್ ಎ.ಡಿ ರವರು ದೂರುದಾರರಿಂದ ರೂ.10,000/– ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆಯಲ್ಲಿ ತುಮಕೂರು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇಬ್ಬರೂ ಆರೋಪಿತರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ.